# ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (ಐ ಎಫ್ ಎ)
# ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ
# ಕಾರ್ಯಾಗಾರಗಳು, ವಸತಿ ಶಿಬಿರಗಳನ್ನು ನಡೆಸಲು
# ಅರ್ಜಿಗಳನ್ನು ಆಹ್ವಾನಿಸುತ್ತದೆ.
# ಪ್ರಸ್ತಾವನೆಗಳನ್ನು ವರ್ಷದಾದ್ಯಂತ ಸ್ವೀಕರಿಸಲಾಗುವುದು.

ಕಲಾ ಅಭ್ಯಾಸ ಕಾರ್ಯಕ್ರಮದ ಉದ್ದೇಶ, ಕಲಾವಿದರು ತಮ್ಮ ಪ್ರಸ್ತುತ ಅಭ್ಯಾಸವನ್ನು ಹೊಸ ದಿಕ್ಕಿನಲ್ಲಿ ವಿಸ್ತರಿಸಲು ಸಹಕಾರಿಯಾದ ಯೋಜನೆಗಳನ್ನು ಕೈಗೊಳ್ಳುವುದು. ಇವುಗಳು ಪ್ರಯೋಗಶೀಲವಾಗಿದ್ದು, ಈಗಾಗಲೇ ಒಪ್ಪಿತವಾದ ರೂಢಿಗಳನ್ನು ಪ್ರಶ್ನಿಸುವಂಥದ್ದಾಗಿರಬಹುದು, ತಮ್ಮ ಕಲಾ ಪ್ರಕಾರದಲ್ಲಿ ವಸ್ತು, ರೂಪ, ಮಾಧ್ಯಮಗಳ ಹೊಸ ಸಾಧ್ಯತೆಗಳನ್ನು ಹುಡುಕುವಂಥದ್ದಾಗಿರಬಹುದು, ರಂಗಸ್ಥಳ, ಶ್ರೋತೃಗಳು/ ವೀಕ್ಷಕರು, ಅಥವಾ ಸಮುದಾಯದ
ಜೊತೆಗೆ ಹೊಸ ರೀತಿಯ ಪಾಲ್ಗೊಳ್ಳುವಿಕೆಯನ್ನು ಹುಡುಕುವಂಥದ್ದಾಗಿರಬಹುದು.

**ಕಾರ್ಯಾಗಾರಗಳು, ವಸತಿ ಶಿಬಿರಗಳು:**
ಐತಿಹಾಸಿಕವಾಗಿ, ವಿವಿಧ ಕಲಾಪ್ರಕಾರಗಳ ಕಲಾವಿದರು ಒಟ್ಟಾಗಿ ಕೆಲಸಮಾಡಿದಾಗ ಕಲಾತ್ಮಕ ವಿಧಾನಗಳಲ್ಲಿ ಹೊಸ ಅವಿಷ್ಕಾರಗಳು ಮೂಡಿವೆ. ಈ ಕಲಾವಿದರ ಗುಂಪುಗಳು ಹಲವು ಪೀಳಿಗೆಗಳಿಂದ, ಬೇರೆ ಬೇರೆ ಪ್ರದೇಶಗಳ ಕಲಾವಿದರಿಂದ ಕೂಡಿರಬಹುದು. ಕಲಾವಿದರು ಚರ್ಚೆ, ಹೊಸ ಶೋಧಗಳಲ್ಲಿ ತೊಡಗಿ,
ಹೊಸ ವಿಧಾನ/ ಪರಿಕಲ್ಪನೆಗಳನ್ನು ಹುಟ್ಟುಹಾಕಬಹುದು. ಇಂದು, ಕಲಾತ್ಮಕ ಕಾರ್ಯಾಗಾರಗಳು ಮತ್ತು ವಸತಿ ಶಿಬಿರಗಳು ಕಲಾತ್ಮಕ ಬಳಗಗಳು-ಸಂಪರ್ಕಜಾಲಗಳಲ್ಲಿರುವ ಸೃಜನಶೀಲ ಶಕ್ತಿಗಳ ಹಿಂದೆಂದೂ ಕಂಡಿರದಂತಹ ಸಂಗಮವನ್ನು ಸಾಧ್ಯವಾಗಿಸುವ ಗಮನಾರ್ಹ ವೇದಿಕೆಗಳಾಗಬಹುದು. ಕಲಾ ಅಭ್ಯಾಸಗಳು ಹೇಗೆ ವಿಕಸನಗೊಳ್ಳುತ್ತಿವೆ ಎಂಬುದನ್ನು ಅನ್ವೇಷಿಸುವ ಮತ್ತು ಅವು ಯಾವ ದಿಕ್ಕಿನಲ್ಲಿ ಹೋಗುತ್ತಿವೆ ಎಂಬುದನ್ನು ಚಿಂತನೆ ಮಾಡುವ ಸ್ಥಳಗಳಾಗಬಹುದು. ಇಲ್ಲಿಯವರೆಗೆ ಕೇಳದ ದನಿಗಳನ್ನು ಕೇಳಿಸಿಕೊಳ್ಳಲೂ ಇಂತಹ
ಕಾರ್ಯಕ್ರಮಗಳು ವೇದಿಕೆಯಾಗಬಹುದು.

ಕಲಾ ಅಭ್ಯಾಸ ಕಾರ್ಯಕ್ರಮದಡಿಯಲ್ಲಿ, ವಿಚಾರ ವಿನಿಮಯ, ಚರ್ಚೆ, ಸಂವಾದ, ಕಲಿಕೆ ಹಾಗೂ ಮಾರ್ಗದರ್ಶನಕ್ಕೆ ಅನುವು ಮಾಡಿಕೊಡುವ ಸಂದರ್ಭ ಹಾಗೂ ವಾತಾವರಣವನ್ನು ಸೃಷ್ಟಿಸುವಂತಹ ಕಾರ್ಯಾಗಾರಗಳು**,** ವಸತಿ ಶಿಬಿರಗಳ ಆಯೋಜನೆಗಾಗಿ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿದ್ದೇವೆ. ಇವು ಕಲಾವಿದರನ್ನು ಪೋಷಿಸುವ, ಕಲಾ ಸಹಯೋಗಗಳನ್ನು ಪ್ರೋತ್ಸಾಹಿಸುವ, ಅಥವಾ ಪ್ರಯೋಗಗಳಿಗೆ ಅನುವು ಮಾಡಿಕೊಡುವ ವಸತಿ ಶಿಬಿರಗಳಿರಬಹುದು, ಕಾರ್ಯಾಗಾರಗಳು ಅಥವಾ ಜ್ಞಾನವನ್ನು ವೃದ್ಧಿಸುವ, ಒಳನೋಟಗಳನ್ನು ಹುಟ್ಟುಹಾಕುವ ಹಾಗೂ ಕಲಾ ಅಭ್ಯಾಸದ ಪರಿಧಿಗಳನ್ನು ವಿಸ್ತರಿಸುವ ಇನ್ನಾವುದೇ ಒಟ್ಟು ಸೇರುವಿಕೆ ಆಗಿರಬಹುದು.

**ಯೋಜನೆಯ ಅವಧಿ:** ಗರಿಷ್ಠ 6 ತಿಂಗಳುಗಳು
**ಅನುದಾನ ಮಿತಿ:** ಗರಿಷ್ಠ ರೂ **3,00,000/-** (ಒಟ್ಟು ಖರ್ಚಿನ ೩೦% ಒಳಗೆ ನಿಮ್ಮ ಗೌರವಧನಕ್ಕಾಗಿ ಬೇಡಿಕೆ ಸಲ್ಲಿಸಬಹುದು)
**ಸಮಯಸೂಚಿ:** ಪ್ರಸ್ತಾವನೆಗಳನ್ನು ವರ್ಷದಾದ್ಯಂತ ಸ್ವೀಕರಿಸಲಾಗುವುದು.

**ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?**
ಈ ಕಾರ್ಯಕ್ರಮದಡಿಯಲ್ಲಿ ನಿರ್ದಿಷ್ಟ ಕಲಾಪ್ರಕಾರವೊಂದರಲ್ಲಿ ಅಥವಾ ಅಂತರ್ಶಿಸ್ತೀಯವಾಗಿ ಕೆಲಸ ಮಾಡುತ್ತಿರುವ ಕಲಾವಿದರು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.
ಇದು ಇವರೆಲ್ಲರನ್ನು ಒಳಗೊಂಡಿರಬಹುದು:

- ಸಂಗೀತ, ಶಬ್ದ, ಪಠ್ಯ, ನೃತ್ಯ, ಚಲನೆ, ನಾಟಕ, ಗೊಂಬೆಯಾಟ, ಕಥೆ ಹೇಳುವುದು, ಇಂದ್ರಜಾಲ, ಸರ್ಕಸ್ ಹಾಗೂ ಇನ್ನಿತರ ಪ್ರದರ್ಶನ ಕಲೆಗಳಲ್ಲಿ ತೊಡಗಿಕೊಂಡ ಕಲಾವಿದರಿರಬಹುದು.

● ಸಿನಿಮಾ (ಸಾಕ್ಷ್ಯಚಿತ್ರ ಹಾಗೂ ಕಲ್ಪನೆಯ ಆಧಾರಿತ), ಅನಿಮೇಶನ್, ಛಾಯಾಚಿತ್ರ, ಇನ್ಸ್ಟಲೇಶನ್, ಹೊಸ ಮಾಧ್ಯಮ, ಕೃತಕ ಬುದ್ಧಿವಂತಿಕೆ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್), ರೊಬೊಟಿಕ್ಸ್, ಸಂವಹನಾತ್ಮಕ ಕಲೆಗಳು, ಗೇಮಿಂಗ್, ಚಿತ್ರಕಲೆ, ಶಿಲ್ಪಕಲೆ, ಪ್ರಿಂಟ್ ತಯಾರಿಕೆ, ಕಾಮಿಕ್ ಪುಸ್ತಕ, ಗ್ರಾಫಿಕ್ ಕಥನ ಇನ್ನಿತರ ಕಲೆಗಳಲ್ಲಿ ತೊಡಗಿಕೊಂಡಿರುವ ದೃಶ್ಯ ಕಲಾವಿದರಿರಬಹುದು.
● ಕಲಾ ನಿರ್ವಾಹಕರು (ಕ್ಯುರೇಟರ್ಸ್) - ಅದರಲ್ಲೂ ಗ್ಯಾಲರಿಗಳ ಹೊರತಾಗಿ ಕೆಲಸ ಮಾಡುತ್ತಿರುವವರು.
● ಕವಿಗಳು, ಕಾದಂಬರಿಕಾರರು, ನಾಟಕಕಾರರು ಇತ್ಯಾದಿ ಸಾಹಿತ್ಯಿಕ ಕಲಾ ಪ್ರಕಾರಗಳಲ್ಲಿ ತೊಡಗಿಕೊಂಡವರು
● ಅಂತರ್ಶಿಸ್ತೀಯ ಕೆಲಸದಲ್ಲಿ ತೊಡಗಿಕೊಂಡಿರುವವರು

**ಅರ್ಹತೆ:**
ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ಯೋಜನಾ ಪ್ರಸ್ತಾವನೆಯನ್ನು ಕಳುಹಿಸಲು ನೀವು ಅರ್ಹರು. ಯೋಜನೆಯಡಿಯಲ್ಲಿ ನಿಮ್ಮ ಜೊತೆ ಸಹಯೋಗ ಕೈಗೊಳ್ಳುವ ಕಲಾವಿದರು ಕೂಡ ಭಾರತೀಯ ನಾಗರಿಕರಾಗಿರುವುದು
ಅವಶ್ಯಕ. ವಿವರಗಳಿಗಾಗಿ ಈ ಲಿಂಕ್ ನೋಡಿ.

**ಯೋಜನಾ ಪ್ರಸ್ತಾವನೆಗಳನ್ನು ಕಳುಹಿಸಲು ಮಾರ್ಗಸೂಚಿ:**
ನಿಮ್ಮ ಸ್ವವಿವರ(ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಮಿಂಚಂಚೆಯನ್ನೊಳಗೊಂಡಂತೆ) ಹಾಗೂ ಯೋಜನಾ ಪ್ರಸ್ತಾವನೆಯನ್ನು ಕೆಳಕಂಡ ವಿಷಯಗಳನ್ನೊಳಗೊಂಡಂತೆ ಕಳುಹಿಸಿ:

- ಕಲಾವಿದರಾಗಿ/ ಕಲಾ ನಿರ್ವಾಹಕರಾಗಿ ನಿಮ್ಮ ಸದ್ಯದ ಕಾಳಜಿಗಳು ಹಾಗೂ ಆಸಕ್ತಿಗಳು
- ಕಾರ್ಯಾಗಾರ/ ವಸತಿ ಶಿಬಿರದ ಉದ್ದೇಶ
- ಕಾರ್ಯಾಗಾರ/ ವಸತಿ ಶಿಬಿರದ ಕೇಂದ್ರ ವಸ್ತು
- ಕಾರ್ಯಾಗಾರ/ ವಸತಿ ಶಿಬಿರದ ವಸ್ತುವಿನ ಪರಿಕಲ್ಪನಾತ್ಮಕ ವಿವರಣೆ
- ಸಂಪನ್ಮೂಲ ವ್ಯಕ್ತಿಗಳ /ಸಹಯೋಗಿಗಳ/ ಭಾಗವಹಿಸುವವರ ಉದ್ದೇಶಿತ ಅನುಭವ
- ಉದ್ದೇಶಿತ ಕಾರ್ಯಾಗಾರ/ ವಸತಿ ಶಿಬಿರದ ಕಾರ್ಯವಿಧಾನಗಳು
- ವಿಸ್ತೃತ ಸಮಯಸೂಚಿ ಹಾಗೂ ಆಯವ್ಯಯ ಪತ್ರ
- ಈ ಯೋಜನೆಗೆ ಪ್ರಸ್ತುತವಾಗುವ ನಿಮ್ಮ ಈ ಹಿಂದಿನ ಕೆಲಸದ ಉದಾಹರಣೆಗಳು

ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತಾವನೆಯನ್ನು ಕಳುಹಿಸಬಹುದು. ಐ ಎಫ್ ಎ ಇಂಗ್ಲಿಶ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ.

ನಿಮ್ಮ ಪ್ರಶ್ನೆಗಳು ಹಾಗೂ ಕರಡು ಯೋಜನೆಗಳನ್ನು ಐ ಎಫ್ ಎ ಸಿಬ್ಬಂದಿಯ ಪ್ರತಿಕ್ರಿಯೆಗಾಗಿ ಬರಹ, ಶ್ರಾವ್ಯ ಅಥವಾ ದೃಶ್ಯ(ವೀಡಿಯೊ) ರೂಪದಲ್ಲಿ ಕಳುಹಿಸಬಹುದು. ನಿಮ್ಮ ಅಂತಿಮ ಪ್ರಸ್ತಾವನೆಗಳನ್ನು ಮಿಂಚಂಚೆಯ ಮುಖಾಂತರ ಜಾನ್ ಜೇವಿಯರ್ಸ್, ಕಾರ್ಯಕ್ರಮ ಅಧಿಕಾರಿ, john@indiaifa.org - ಇವರಿಗೆ - **‘ಕಾರ್ಯಾಗಾರ/ ವಸತಿ ಶಿಬಿರಕ್ಕಾಗಿ ಯೋಜನಾ ಪ್ರಸ್ತಾವನೆ (ಕಲಾ ಅಭ್ಯಾಸ)’** ಎಂಬ ಒಕ್ಕಣೆಯೊಂದಿಗೆ ಕಳುಹಿಸಿ. ನಿಮ್ಮ ಪ್ರಸ್ತಾವನೆಯನ್ನು ಕುರಿತಂತೆ ಯಾವುದೇ ಪ್ರಶ್ನೆ/ಸಂದೇಹಗಳಿದ್ದಲ್ಲಿ, ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ಕೂಡ ಇದೇ ಮಿಂಚಂಚೆ ವಿಳಾಸಕ್ಕೆ ಬರೆಯಿರಿ.

ಆಯ್ಕೆಯಾದ ಎಲ್ಲ ಯೋಜನೆಗಳನ್ನೂ ಐ ಎಫ್ ಎ ಸ್ವತಃ ಕಾರ್ಯಗತಗೊಳಿಸುತ್ತದೆ.

**ಐ ಎಫ್ ಎ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.**